KACD510018442022

Presented on : 13-07-2022
Registered on : 14-07-2022
Decided on : 11-06-2026
Duration : 3 years, 10 months, 29 days

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ದಿನಾಂಕಃ 11 ನೇ ಜೂನ್ ಮಾಹೆ, 2026 ನೇ ಇಸವಿ**

: ಉಪಸ್ಥಿತರು :

**ಶ್ರೀ ಪ್ರಸನ್ನ ಕುಮಾರ್ ಸಿ.,**
**ಬಿ.ಎ.ಎಲ್. ಎಲ್.ಎಲ್.ಬಿ.**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.

**ಸಿ.ಸಿ. ಸಂಖ್ಯೆಃ 1169/2022**

ರಾಜ್ಯದ ಪರವಾಗಿ
ಹೊಸದುರ್ಗ ಪೋಲೀಸರು,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ. .....ಫಿರ್ಯಾದುದಾರರು

**(ಫಿರ್ಯಾದುದಾರರ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿನಿಧಿಸಿರುತ್ತಾರೆ)**

ವಿರುದ್ಧ

ಅಜ್ಜಪ್ಪ @ ದುರುಗಪ್ಪ
ತಂದೆ ಸಣ್ಣ ಹನುಮಪ್ಪ ಬಳ್ಳಾರಿ
ಸುಮಾರು 28 ವರ್ಷ,
ವೃತ್ತಿ: ಡ್ರೈವರ್
ವಾಸ: ಚಿಕ್ಕಬೀಡಿನಾಳ್ ಗ್ರಾಮ,
ಯಲಬುರ್ಗ ತಾಲ್ಲೂಕು,
ಕೊಪ್ಪಳ ಜಿಲ್ಲೆ

PRASANNAKUMAR C
Digitally signed by PRASANNAKUMAR C
Date: 2026.06.11 16:41:00 +0530

ಎಂ ಆರೋಪಿ

**(ಆರೋಪಿತನ ಪರವಾಗಿ ಶ್ರೀಮತಿ ಹೆಚ್.ಎಸ್.ರುಕ್ಮಿಣಿ ವಕೀಲರು ಪ್ರತಿನಿಧಿಸಿರುತ್ತಾರೆ.)**

| | | |
|---|---|---|
| ಕೃತ್ಯ ನಡೆದ ದಿನಾಂಕ | : | 08.03.2020 |
| ಯಾವ ಕಲಂ.ಗಳಡಿಯಲ್ಲಿ ಆರೋಪಣೆ ಮಾಡಲಾಗಿದೆ | : | ಭಾರತೀಯ ದಂಡ ಸಂಹಿತೆ ಕಲಂ. 279, 337 ಮತ್ತು 304(ಎ) ಹಾಗೂ ಬಾರತೀಯ ಮೋಟಾರು ವಾಹನ ಕಾಯ್ದೆ ಕಲಂ.3 ಸಹವಾಚಕ 181, ಕಲಂ 146 ಸಹವಾಚಕ 196 |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | : | 25.01.2025 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | | 13.11.2025 |
| ತೀರ್ಪು ಘೋಷಣೆಯಾದ ದಿನಾಂಕ | : | 11.06.2026 |
| ಆರೋಪಿತರ ಹೇಳಿಕೆ | : | ತಪ್ಪು ಮಾಡಿಲ್ಲ |
| ನ್ಯಾಯಾಲಯದ ಅಭಿಪ್ರಾಯ | : | ಆರೋಪಿಯನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ |

**(ಪ್ರಸನ್ನ ಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಹೊಸದುರ್ಗ.**

**** ತೀರ್ಪು****

ಹೊಸದುರ್ಗ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ಮೇಲ್ಕಂಡ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ. 279, 337 ಮತ್ತು 304(ಎ) ಹಾಗೂ ಬಾರತೀಯ ಮೋಟಾರು ವಾಹನ ಕಾಯ್ದೆ ಕಲಂ.3 ಸಹವಾಚಕ 181, ಕಲಂ 146 ಸಹವಾಚಕ 196 ರಡಿಯಲ್ಲಿ ದಂಡಿಸಲ್ಪಡುವ ಅಪರಾಧಗಳನ್ನು ಎಸಗಿರುತ್ತಾರೆಂದು ಆರೋಪಿಸಿ ಅವರ ವಿರುದ್ಧ ಅಂತಿಮ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತಾರೆ.

**ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

2. ದಿನಾಂಕಃ 08.03.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಹೊಸದುರ್ಗ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹೊಸದುರ್ಗ

ತಾಲ್ಲೂಕು, ಬೋಕಿಕೆರೆ ಗೇಟ್ ಹತ್ತಿರ ಆರೋಪಿಯು ಕೆಎ-37-ಟಿಎ-5796 ಹಾಗೂ ಕೆಎ-37-ಟಿಎ-5797 ನೇ ಟ್ರ್ಯಾಕ್ಟರ್ ವಾಹನದಲ್ಲಿ ಯಾಲಕಪ್ಪನಹಟ್ಟಿ ಗ್ರಾಮದ ಬಳಿ ಚಾಸಾ-1 ಆನಂದಪ್ಪ ಮತ್ತು ಚಾಸಾ-2 ಸುರೇಶ ಹಾಗೂ ಮೃತ ಶರಣ ತಂದೆ ಬಸಪ್ಪ ರವರು ಸಹಾಯದಿಂದ ವಿದ್ಯುತ್ ಕಂಬಗಳನ್ನು ಟ್ರ್ಯಾಕ್ಟರ್ ವಾಹನಕ್ಕೆ ಲೋಡ್ ಮಾಡಿಕೊಂಡು ನೀರಗುಂದ ಗ್ರಾಮಕ್ಕೆ ಹೋಗಲು ಸದರಿಯವರನ್ನು ಟ್ರ್ಯಾಕ್ಟರ್ ನಲ್ಲಿ ಕೂರಿಸಿಕೊಂಡು ಹೋಗುತ್ತಿರುವಾಗ ಬೋಕಿಕೆರೆ ಗೇಟ್ ಬಳಿ ಆರೋಪಿಯು ಟ್ರ್ಯಾಕ್ಟರ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಟ್ರ್ಯಾಕ್ಟರ್ ಟ್ರೈಲರ್ ನಿಯಂತ್ರಣ ತಪ್ಪಿ ರಸ್ತೆಯ ಬದಿಗೆ ಬಿದ್ದು ಪಲ್ಟಿ ಹೊಡೆದ ಪರಿಣಾಮ ಚಾಸಾ-1 ಮತ್ತು 2 ರವರಿಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ ಹಾಗೂ ಶರಣ ತಂದೆ ಬಸಪ್ಪ ರವರ ಮೇಲೆ ವಿದ್ಯುತ್ ಕಂಬಗಳು ಬಿದ್ದು ತಲೆಗೆ ಮತ್ತು ಇತರೆ ಕಡೆಗೆ ಪೆಟ್ಟುಗಳು ಬಿದ್ದಿದ್ದರಿಂದ ಸದರಿಯವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಆರೋಪಿ ಚಾಲಕನಿಗೆ ಚಾಲನಾ ಪರವಾನಗಿ ಇಲ್ಲದೆ ಹಾಗೂ ಅಪಾದಿತ ವಾಹನಕ್ಕೆ ವಿಮಾ ಸೌಲಭ್ಯ ಇಲ್ಲದೆ ಇದ್ದರೂ ಆರೋಪಿ ಸದರಿ ವಾಹನವನ್ನು ಚಾಲನೆ ಮಾಡಿರುವುದು ಈ ಪ್ರಕರಣದ ಸಾರಾಂಶವಾಗಿರುತ್ತದೆ.

3. ಪ್ರಸ್ತುತ ಪ್ರಕರಣದಲ್ಲಿ ಚಾಸಾ-12 ಉಮೇಶ್ ಹೆಚ್.ಸಿ.-1034 ರವರು ಚಾಸಾ-1 ರವರಿಂದ ದೂರು ಸ್ವೀಕರಿಸಿ ಠಾಣಾ ಮೊಕ್ಕದ್ದಮೆ ಸಂಃ 78/2020 ರಂತೆ ಪ್ರಕರಣವನ್ನು ದಾಖಲು ಮಾಡಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗಳಿಗೆ ನಿವೇದಿಸಿಕೊಂಡು ಪ್ರಕರಣದ ಕಡತವನ್ನು ಚಾಸಾ-13 ರವರಿಗೆ ಹಸ್ತಾಂತರಿಸಿರುತ್ತಾರೆ, ನಂತರ ಚಾಸಾ-13 ಶಿವಕುಮಾರ್ ಈ ಪಿ.ಎಸ್.ಐ ರವರು ಪ್ರಕರಣದ ಕಡತವನ್ನು ಭಾಗಶಃ ತನಿಖೆ ನಡೆಸಿ ಚಾಸಾ-14 ರವರಿಗೆ ನೀಡಿರುತ್ತಾರೆ. ಚಾಸಾ-14 ಎಂ.ಡಿ.ಫೈಜುಲ್ಲಾ ರವರು ಚಾಸಾ-13 ರವರಿಂದ ಕಡತವನ್ನು ಪಡೆದು ದಿನಾಂಕ 12.03.2020 ರಂದು ಚಾಸಾ-10 ರವರಿಂದ

ಮೃತ ಶರಣ್ ರವರ ಮರಣೋತ್ತರ ವರದಿ ಹಾಗೂ ದಿನಾಂಕ 24.03.2020 ರಂದು ಚಾಸಾ-1 ಮತ್ತು 2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 28.05.2020 ರಂದು ಅಪಘಾತ ಪಡಿಸಿದ ಟ್ರ್ಯಾಕ್ಟರ್ ಮಾಲೀಕರಾದ ಚಾಸಾ-9 ರವರಿಗೆ ಐ.ಎಂ.ವಿ.ಕಲಂ.133 ರಡಿಯಲ್ಲಿ ನೋಟೀಸ್ ನೀಡಿ ಅದೇ ದಿನ ಅವರ ಉತ್ತರ ಪಡೆದು ವಾಹನದ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ. ಅದೇ ದಿನ ಸಂಜೆ 5.00 ಗಂಟೆಗೆ ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ. ನಂತರ ಅದೇ ದಿನ ಟ್ರ್ಯಾಕ್ಟರ್ ಮಾಲೀಕರಾದ ಚಾಸಾ-9 ರವರಿಂದ ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಅವರ ವಶಕ್ಕೆ ನೀಡಿ, ಅದೇ ದಿನ ಚಾಸಾ-1 ಮತ್ತು 2 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ದಿನಾಂಕ 12.08.2020 ರಂದು ಚಾಸಾ-11 ರವರಿಂದ ವಾಹನದ ತಪಾಸಣಾ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ಆರೋಪಿತನ ವಿರುದ್ಧ ದೋಷಾರೋಪಣೆ ಪತ್ರವನ್ನು ಸಲ್ಲಿಸಿದ ನಂತರ ದೋಷಾರೋಪಣಾ ಪತ್ರದ ಆಧಾರದ ಮೇಲೆ ಭಾರತೀಯ ದಂಡ ಸಂಹಿತೆ ಕಲಂ. 279, 337 ಮತ್ತು 304(ಎ) ಹಾಗೂ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ.3 ಸಹವಾಚಕ 181, ಕಲಂ 146 ಸಹವಾಚಕ 196 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ. 190(1)(ಬಿ) ರಡಿಯಲ್ಲಿ ಸಂಜ್ಞೆ ತೆಗೆದುಕೊಂಡು ಪ್ರಕರಣವನ್ನು ದಾಖಲಿಸಿಕೊಳ್ಳಲಾಯಿತು. ನಂತರ ಆರೋಪಿಗೆ ನ್ಯಾಯಾಲಯದಿಂದ ಸಮನ್ಸ್ ಹೊರಡಿಸಲಾಯಿತು.

5. ಆರೋಪಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ. 207 ರಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ನಂತರ ಆರೋಪಿಯ ಮೇಲೆ ಹೊರಿಸಿದ

ಆಪಾದನೆಗಳನ್ನು ಓದಿ ಹೇಳಲಾಗಿ ಆರೋಪಿತನು ತಾನು ತಪ್ಪು ಮಾಡಿಲ್ಲವೆಂದು ಮತ್ತು ತನ್ನ ಪರ ಪ್ರತಿರಕ್ಷೆ ಇರುತ್ತದೆ ಎಂದು ಹೇಳಿ, ತನ್ನ ಮೇಲಿನ ಆರೋಪಗಳನ್ನು ಅಲ್ಲಗಳೆದಿದ್ದು, ವಿಚಾರಣೆ ಆಗಬೇಕೆಂದು ನಿವೇದಿಸಿಕೊಂಡಿರುತ್ತಾರೆ.

6. ಅದರಂತೆ ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ನಿರ್ಣಯಕ್ಕೆ ಉದ್ಭವಿಸುತ್ತದೆ.

1. ದಿನಾಂಕಃ 08.03.2020 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಹೊಸದುರ್ಗ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಹೊಸದುರ್ಗ ತಾಲ್ಲೂಕು ಬೋಕಿಕೆರೆ ಗೇಟ್ ಹತ್ತಿರದಲ್ಲಿ ಆರೋಪಿಯು ಕೆಎ-37-ಟಿಎ-5797 ಟ್ರ್ಯಾಕ್ಟರ್ ನಲ್ಲಿ ಯಾಲಕಪ್ಪನಹಟ್ಟಿ ಗ್ರಾಮದ ಬಳಿ ಚಾಸಾ-1 ಆನಂದಪ್ಪ ಮತ್ತು ಚಾಸಾ-2 ಸುರೇಶ ಹಾಗೂ ಮೃತ ಶರಣ ತಂದೆ ಬಸಪ್ಪ ರವರ ಸಹಾಯದಿಂದ ವಿದ್ಯುತ್ ಕಂಬಗಳನ್ನು ಟ್ರ್ಯಾಕ್ಟರ್ ವಾಹನಕ್ಕೆ ಲೋಡ್ ಮಾಡಿಕೊಂಡು ನೀರಗುಂದ ಗ್ರಾಮಕ್ಕೆ ಹೋಗಲು ಚಾಸಾ-1, 2 ಮತ್ತು ಮೃತ ಶರಣ ರವರನ್ನು ಟ್ರ್ಯಾಕ್ಟರ್ ಟ್ರೈಲರ್ ನಲ್ಲಿ ಕೂರಿಸಿಕೊಂಡು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಟ್ರ್ಯಾಕ್ಟರ್ ಟ್ರೈಲರ್ ನಿಯಂತ್ರಣ ತಪ್ಪಿ ರಸ್ತೆಯ ಬದಿಗೆ ಬಿದ್ದು ಪಲ್ಟಿ ಹೊಡೆಸಿ ಮಾನವ ಜೀವಕ್ಕೆ ಅಪಾಯವಾಗುವಂತೆ ಅಪಘಾತ ಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂಃ 279 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ

ರುಜುವಾತು ಪಡಿಸುತ್ತಾರೆಯೆ?

2. ಎರಡನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿ ಅಪಘಾತ ಪಡಿಸಿದ ಪರಿಣಾಮ ಚಾಸಾ-1 ಮತ್ತು 2 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 337 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

3. ಮೂರನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿ ಅಪಘಾತ ಪಡಿಸಿದ ಪರಿಣಾಮ ಸದರಿ ವಾಹನದಲ್ಲಿದ್ದ ಶರಣ ತಂದೆ ಬಸಪ್ಪ ರವರ ಮೇಲೆ ವಿದ್ಯುತ್ ಕಂಬಗಳು ಬಿದ್ದು ತಲೆಗೆ ಮತ್ತು ಇತರೆ ಕಡೆಗೆ ಪೆಟ್ಟುಗಳು ಬಿದ್ದಿದ್ದರಿಂದ ಸದರಿಯವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

4. ನಾಲ್ಕನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಟ್ರ್ಯಾಕ್ಟರ್ ವಾಹನಕ್ಕೆ ಅಧಿಕೃತ ವಿಮಾಸೌಲಭ್ಯ ಇಲ್ಲದ ವಾಹನವನ್ನು ಆರೋಪಿ

ಚಾಲಕನು ಚಾಲನೆ ಮಾಡಿದ್ದು, ಈ ಮೂಲಕ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 3 ಸಹವಾಚಕ ಕಲಂ 181 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

5. ಐದನೇಯದಾಗಿ, ಸದರಿ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿ ಚಾಲಕನಿಗೆ ಅಧಿಕೃತ ಚಾಲನಾ ಪರವಾನಗಿ ಇಲ್ಲದೆ ಇದ್ದರೂ ಸಹಾ ವಿಮಾಸೌಲಭ್ಯ ಇಲ್ಲದ ವಾಹನವನ್ನು ಚಾಲನೆ ಮಾಡಿದ್ದು, ಈ ಮೂಲಕ ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 146 ಸಹವಾಚಕ ಕಲಂ 196 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಆರೋಪಿ ಎಸಗಿದ್ದಾರೆ ಎಂಬುದನ್ನು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೆ?

6. ಯಾವ ಆದೇಶ?

7. ಅಭಿಯೋಜನೆಯವರು ಆರೋಪಿತನ ಮೇಲೆ ಹೊರಿಸಿದ ಆರೋಪಗಳನ್ನು ರುಜುವಾತುಮಾಡುವ ಸಲುವಾಗಿ ಸಾಕ್ಷಿ ವಿಚಾರಣೆಗೆ ಗೊತ್ತು ಮಾಡಲಾಗಿ ದೋಷರೋಪಣೆ ಪಟ್ಟಿಯಲ್ಲಿರುವ ಚಾಸಾ-1 ರಿಂದ 14 ರವರ ಪೈಕಿ, ಚಾಸಾ-2, 8, 1 ಮತ್ತು 14 ರವರನ್ನು ಕ್ರಮವಾಗಿ ಅಸಾ-1 ರಿಂದ 4 ಎಂದು ಅಭಿಯೋಜನೆಯ ಪರವಾಗಿ ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಿರುತ್ತಾರೆ. ಸದರಿ ಸಾಕ್ಷಿದಾರರ ಕಡೆಯಿಂದ ನಿಪಿ-1 ರಿಂದ 16 ರಂತೆ

ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು. ಸಾಕ್ಷ್ಯ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಮತ್ತು ಆರೋಪಿ ಹಾಗೂ ಆರೋಪಿಯ ಪರ ವಕೀಲರು ನೀಡಿದ ಸಮ್ಮತಿ ಮೇರೆಗೆ ಅಭಿಯೋಜನೆಯವರು ಚಾಸಾ-3 ರಿಂದ 7 ಮತ್ತು 9 ರಿಂದ 13 ರವರ ಸಾಕ್ಷ್ಯವನ್ನು ಕೈಬಿಟ್ಟಿರುತ್ತಾರೆ. ಅದರಂತೆ ಸಮ್ಮತಿ ಮೇರೆಗೆ ನಿಪಿ-9 ರಿಂದ 11 ರ ದಾಖಲೆಗಳನ್ನು ಗುರುತಿಸಲಾಗಿದೆ.

8. ಅಭಿಯೋಜನೆಯ ಪರವಾಗಿ ಸಾಕ್ಷಿಗಳ ವಿಚಾರಣೆಯ ಮುಕ್ತಾಯದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲ.313 ರಡಿಯಲ್ಲಿ ಪ್ರಶ್ನೆಗಳನ್ನು ರಚಿಸಿ ಆರೋಪಿಯ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ಆರೋಪಿತನು ಎಲ್ಲಾ ಪ್ರಶ್ನೆಗಳಿಗೆ ತನ್ನ ಹೇಳಿಕೆಗಳಲ್ಲಿ ಸುಳ್ಳು ಎಂದು ಉತ್ತರಿಸಿರುತ್ತಾರೆ.

9. ಆರೋಪಿತನು ತನ್ನ ಪರವಾಗಿ ಯಾವುದೇ ಮೌಖಿಕ ಸಾಕ್ಷ್ಯವನ್ನು ಮಂಡಿಸಿರುವುದಿಲ್ಲ ಹಾಗೂ ತನ್ನ ಪರವಾಗಿ ಯಾವುದೇ ದಾಖಲೆಗಳನ್ನು ನಿಶಾನೆಗೆ ಗುರುತಿಸಿಕೊಂಡಿರುವುದಿಲ್ಲ.

10. ವಾದಗಳನ್ನು ಆಲಿಸಲಾಯಿತು. ಈ ಪ್ರಕರಣದ ಕಡತ ಹಾಗೂ ಸಾಕ್ಷಿದಾರರ ಸಾಕ್ಷ್ಯವನ್ನು ಹಾಗೂ ಲಭ್ಯವಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿದೆ.

11. ಅಭಿಯೋಜನೆಯ ಪರ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯಗಳನ್ನು ಆಧರಿಸಿ, ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶಃ 1 ರಿಂದ 5 - ನಕಾರಾತ್ಮಕವಾಗಿ
ಅಂಶಃ 6 - ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗೋಸ್ಕರ

## :: ಕಾರಣಗಳು ::

**12. ಅಂಶಃ 1 ರಿಂದ 5** - ಈ ಐದು ಅಂಶಗಳು ಪರಸ್ಪರ ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಾಕ್ಷ್ಯದ ವಿಶ್ಲೇಷಣೆಯ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಈ ಐದೂ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ಚಾಸಾ-2 ಸುರೇಶ ತಂದೆ ಮಾನಪ್ಪ ರವರು ಬಾಧಿತ ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಪಂಚನಾಮೆಯ ಕಾಲದಲ್ಲಿ ಹಾಜರಿದ್ದ ಸಾಕ್ಷಿದಾರರಾಗಿದ್ದು ಅವರನ್ನು ಅಸಾ-1 ಎಂದು ವಿಚಾರಣೆಗೆ ಒಳಪಡಿಸಿ ಅವರ ಮೂಲಕ ನಿಪಿ-1 ಕೃತ್ಯ ಸ್ಥಳ ಪಂಚನಾಮೆ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-1(ಎ), ನಿಪಿ-2 ನಕಾಶೆ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-2(ಎ), ನಿಪಿ-3 ಮತ್ತು 4 ಫೋಟೋಗಳು, ನಿಪಿ-5 ವಾಹನ ಪರಿಶೀಲನಾ ಪಂಚನಾಮೆ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-5(ಎ) ಹಾಗೂ ಅವರ ಹೇಳಿಕೆಯನ್ನು ನಿಪಿ-6 ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

14. ಚಾಸಾ-2 ಯಮುನಪ್ಪ ರವರು ರವರು ಸ್ಥಳ ಮತ್ತು ವಾಹನ ಪಂಚನಾಮೆಯ ಸಾಕ್ಷಿದಾರರಾಗಿದ್ದು ಅವರನ್ನು ಅಸಾ-2 ಎಂದು ವಿಚಾರಣೆಗೆ ಒಳಪಡಿಸಿ ಅವರ ಮೂಲಕ ನಿಪಿ-1, 2, 5 ರ ದಾಖಲೆಯಲ್ಲಿರುವ ಅವರ ಸಹಿಯಗಳನ್ನು ನಿಪಿ-1(ಬಿ). ನಿಪಿ-2(ಬಿ), ನಿಪಿ-5(ಬಿ) ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

15. ಚಾಸಾ-1 ಆನಂದಪ್ಪ ರವರು ಫಿರ್ಯಾದುದಾರು ಮತ್ತು ಬಾಧಿತ ಸಾಕ್ಷಿದಾರರರಾಗಿದ್ದು ಅವರನ್ನು ಅಸಾ-3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಅಸಾ-3 ರವರ ಮೂಲಕ ನಿಪಿ-1, ನಿಪಿ-1 ರ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-1(ಸಿ) ಮತ್ತು ನಿಪಿ-2(ಸಿ)

ಎಂದು, ನಿಪಿ-7 ದೂರು ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-7(ಎ), ಅಸಾ-3 ರವರ ಹೇಳಿಕೆಯನ್ನು ನಿಪಿ-8 ಎಂದು ನಿಶಾನೆಗೆ ಗುರುತಿಸಿಕೊಂಡಿರುತ್ತಾರೆ.

16. ಚಾಸಾ-14 ಎಂ.ಡಿ ಫೈಜುಲ್ಲಾ ರವರು ತನಿಖೆಯನ್ನು ಪೂರೈಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ಸಾಕ್ಷಿದಾರರಾಗಿದ್ದು ಅವರನ್ನು ಅಸಾ-4 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು ಅವರ ಮೂಲಕ ನಿಪಿ-6, ನಿಪಿ-8, ನಿಪಿ-9, ನಿಪಿ-10 ರ ದಾಖಲೆಯಲ್ಲಿರುವ ಅವರ ಸಹಿಗಳನ್ನು ನಿಪಿ-6(ಎ), ನಿಪಿ-8(ಎ), ನಿಪಿ-9(ಎ), ನಿಪಿ-10(ಎ) ಹಾಗೂ ನಿಪಿ-12 ಚಾಸಾ-9 ರವರಿಗೆ ನೀಡಿ ಐ.ಎಂ.ವಿ.ಕಲಂ 133 ರ ನೋಟೀಸ್ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-12(ಎ), ನಿಪಿ-13 ಚಾಸಾ-9 ರವರ ಹೇಳಿಕೆ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-13(ಎ), ನಿಪಿ-14 ಇಂಡೆಮಿನಿಟಿ ಬಾಂಡ್ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-14(ಎ), ನಿಪಿ-15 ಚಾಸಾ-1 ರವರ ಗಾಯದ ಪ್ರಮಾಣ ಪತ್ರ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-15(ಎ), ನಿಪಿ-16 ಚಾಸಾ-2 ರವರ ಗಾಯದ ಪ್ರಮಾಣ ಪತ್ರ ಹಾಗೂ ಸದರಿ ದಾಖಲೆಯಲ್ಲಿರುವ ಅವರ ಸಹಿಯನ್ನು ನಿಪಿ-16(ಎ) ಎಂದು ನಿಶಾನೆಗೆ ಗುರುತಿಕೊಂಡಿರುತ್ತಾರೆ.

17. ಆರೋಪಿ ಪರ ವಕೀಲರ ಸಮ್ಮತಿ ಮೇರೆಗೆ ನಿಪಿ-9 ಶವತನಿಖಾ ಪಂಚನಾಮೆ, ನಿಪಿ-10 ಮೃತ ಶರಣ ರವರ ಶವ ತನಿಖಾ ವರದಿ ಮತ್ತು ನಿಪಿ-11 ವಾಹನ ಪರೀಶೀಲನಾ ವರದಿಯನ್ನು ನಿಶಾನೆಗೆ ಗುರುತಿಸಲಾಗಿದೆ.

18. ಅಸಾ.1 ಸುರೇಶ್ ರವರು ಪ್ರತ್ಯಕ್ಷ ಹಾಗೂ ಕೃತ್ಯ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು ಅವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಪರಿಚಯವಿರುತ್ತದೆಂದು, ಸದರಿ ಪ್ರಕರಣದಲ್ಲಿ ಮರಣ ಹೊಂದಿದ ಮೃತ ಶರಣ ರವರ ಪರಿಚಯವಿರುತ್ತದೆಂದು, ಸದರಿಯವರು ಯಾವ ರೀತಿ ಮರಣ ಹೊಂದಿರುತ್ತಾರೆಂದು ತನಗೆ ಗೊತ್ತಿಲ್ಲವೆಂದು, ತಾನು ಅಪಘಾತನ್ನು

ಪ್ರತ್ಯಕ್ಷವಾಗಿ ನೋಡಿರುತ್ತೇನೆಂದು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲವೆಂದು, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದು, ಹಾಗೂ ನಿಪಿ-1, 2, 5 ಮತ್ತು 6 ರ ದಾಖಲೆಯಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲವೆಂದು, ನಿಪಿ-3 ಮತ್ತು 4 ರ ಫೋಟೋಗಳನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಯಿತು ಎಂದು ತನಗೆ ಗೊತ್ತಿಲ್ಲವೆಂದು, ಪೊಲೀಸರು ತಮ್ಮ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಮಾಡಿಲ್ಲ ಮತ್ತು ವಾಹನ ಪರಿಶೀಲನಾ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

19. ಅಸಾ.2 ಯಮುನಪ್ಪ ರವರು ಕೃತ್ಯ ಸ್ಥಳ ಪಂಚನಾಮೆ ಸಾಕ್ಷಿದಾರರಾಗಿದ್ದು ಅವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯ ಪರಿಚಯವಿರುತ್ತದೆಂದು, ಸದರಿ ಪ್ರಕರಣದಲ್ಲಿ ಮರಣ ಹೊಂದಿದ ಮೃತ ಶರಣ ರವರ ಪರಿಚಯವಿರುವುದಿಲ್ಲವೆಂದು, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದು, ಹಾಗೂ ನಿಪಿ-1, 2 ಮತ್ತು 5 ರ ದಾಖಲೆಯಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲವೆಂದು, ನಿಪಿ-3 ಮತ್ತು 4 ರ ಫೋಟೋಗಳನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಯಿತು ಎಂದು ತನಗೆ ಗೊತ್ತಿಲ್ಲವೆಂದು, ಪೊಲೀಸರು ತನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಮಾಡಿಲ್ಲ ಮತ್ತು ವಾಹನ ಪರಿಶೀಲನಾ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

20. ಹೀಗಿರುವಾಗ, ಅಸಾ.3 ಆನಂದಪ್ಪ ರವರು ಫಿರ್ಯಾದುದಾರರು ಹಾಗೂ ಬಾಧಿತ ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣದ ಆರೋಪಿ ಮತ್ತು ಮೃತ ಶರಣ ರವರು ತನ್ನ ಸ್ನೇಹಿತರೆಂದು, ಶರಣ ರವರು ಯಾವ ರೀತಿ ಅಪಘಾತದಲ್ಲಿ ಮರಣ ಹೊಂದಿರುತ್ತಾರೆಂದು ತನಗೆ ಗೊತ್ತಿಲ್ಲವೆಂದು, ಅಪಘಾತ ಯಾವ ದಿನಾಂಕದಂದು ಆಗಿರುತ್ತದೆಂದು ತನಗೆ ಗೊತ್ತಿಲ್ಲವೆಂದು, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದು,

ನಿಪಿ-1, 2 ಮತ್ತು 7 ರ ದಾಖಲೆಯಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲವೆಂದು, ನಿಪಿ-3 ಮತ್ತು 4 ರ ಫೋಟೋಗಳನ್ನು ಯಾವ ಉದ್ದೇಶಕ್ಕಾಗಿ ತೆಗೆಯಲಾಯಿತು ಎಂದು ತನಗೆ ಗೊತ್ತಿಲ್ಲವೆಂದು, ಈ ಕುರಿತು ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಅಭಿಯೋಜನೆಯವರ ಪ್ರಕರಣಕ್ಕೆ ವಿರುದ್ಧವಾದ ಸಾಕ್ಷ್ಯವನ್ನು ನುಡಿದಿರುತ್ತಾರೆ.

21. ಹೀಗಿರುವಾಗ ಸದರಿ ಅಸಾ-1 ರಿಂದ 3 ರವರು ತಮ್ಮ ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದ ಸಾಕ್ಷ್ಯವನ್ನು ಗಮನಿಸಿದ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿಕೊಂಡು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿ, ಘಟನೆಗೆ ಹಾಗೂ ದಾಖಲೆಗಳಿಗೆ ಪೂರಕವಾದ ಸೂಚನೆಗಳನ್ನು ಸದರಿ ಸಾಕ್ಷಿದಾರರಿಗೆ ಸೂಚಿಸಿದರೂ ಸಹ ಸದರಿ ಸಾಕ್ಷಿದಾರರು ಅಭಿಯೋಜನೆಯವರ ಸೂಚನೆಗಳನ್ನು ಸ್ಪಷ್ಟವಾಗಿ ತಮ್ಮ ತಮ್ಮ ಪಾಟೀ ಸವಾಲಿನಲ್ಲಿ ಅಲ್ಲಗಳೆದಿರುತ್ತಾರೆ.

22. ಇನ್ನು ಈ ಪ್ರಕರಣದ ಪೋಲೀಸ್ ಇಲಾಖೆಯ ಸಾಕ್ಷಿದಾರರಾದ ಅಸಾ.4 ಎಂ.ಡಿ.ಫೈಜುಲ್ಲಾ ರವರು ತಮ್ಮ ವಿಚಾರಣಾ ಸಾಕ್ಷ್ಯದಲ್ಲಿ ಚಾಸಾ-13 ರವರಿಂದ ಕಡತವನ್ನು ಪಡೆದು ದಿನಾಂಕ 12.03.2020 ರಂದು ಚಾಸಾ-10 ರವರಿಂದ ಮೃತ ಶರಣ್ ರವರ ಮರಣೋತ್ತರ ವರದಿ ಹಾಗೂ ದಿನಾಂಕ 24.03.2020 ರಂದು ಚಾಸಾ-1 ಮತ್ತು 2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಾಗಿ, ದಿನಾಂಕ 28.05.2020 ರಂದು ಅಪಘಾತ ಪಡಿಸಿದ ಟ್ರ್ಯಾಕ್ಟರ್ ಮಾಲೀಕರಾದ ಚಾಸಾ-9 ರವರಿಗೆ ಐ.ಎಂ.ವಿ.ಕಲಂ.133 ರಡಿಯಲ್ಲಿ ನೋಟೀಸ್ ನೀಡಿ ಅದೇ ದಿನ ಅವರ ಉತ್ತರ ಪಡೆದು ವಾಹನದ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆಂದು, ಅದೇ ದಿನ ಸಂಜೆ 5.00 ಗಂಟೆಗೆ ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆ

ಮಾಡಿರುವುದಾಗಿ, ನಂತರ ಅದೇ ದಿನ ಟ್ರ್ಯಾಕ್ಟರ್ ಮಾಲೀಕರಾದ ಚಾಸಾ-9 ರವರಿಂದ ಇಂಡೆಮಿನಿಟಿ ಬಾಂಡ್ ಪಡೆದು ವಾಹನವನ್ನು ಅವರ ವಶಕ್ಕೆ ನೀಡಿ, ಅದೇ ದಿನ ಚಾಸಾ-1 ಮತ್ತು 2 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆಂದು, ದಿನಾಂಕ 12.08.2020 ರಂದು ಚಾಸಾ-11 ರವರಿಂದ ವಾಹನದ ತಪಾಸಣಾ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಅರೋಪಿ ಪರ ವಕೀಲರು ವಿವರವಾದ ಪಾಟೀ ಸವಾಲಿಗೆ ಒಳಪಡಿಸಿದ್ದು ಸದರಿ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಆರ್.ಸಿ.ಮಾಲೀಕರಿಗೆ ಯಾವುದೇ ನೋಟೀಸ್ ನೀಡಿಲ್ಲ, ಚಾಸಾ-9 ರವರು ಆರೋಪಿ ವಾಹನ ಚಾಲನೆ ಮಾಡುತ್ತಿದ್ದ ಎಂಬುದರ ಬಗ್ಗೆ ಮಾಹಿತಿ ನೀಡಿರುತ್ತಾರೆ ಎಂಬುದು ಸುಳ್ಳು, ಮೃತರ ಮರಣೋತ್ತರ ವರದಿಯನ್ನು ಪಡೆದಿರುವುದಿಲ್ಲ, ಚಾಸಾ-1 ಮತ್ತು 2 ರವರ ಹೇಳಿಕೆಯನ್ನು ಪಡೆದಿಲ್ಲ, ಮೃತ ಶರಣ ರವರಿಗೆ ಅಪಘಾತ ಆಗಿದ್ದರೂ ಅದನ್ನು ಮರೆಮಾಚಿ ಅವರಿಗೆ ಪರಿಹಾರ ಬರಲಿ ಎಂದು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ, ಆರೋಪಿಗೆ ನೋಟೀಸ್ ನೀಡಿ ನಂತರ ದಸ್ತಗಿರಿ ಮಾಡಿ ಬಿಡುಗಡೆ ಮಾಡಿರುವುದಾಗಿ ಹೇಳಿರುವುದು ಸುಳ್ಳು, ಅಪಾದಿತ ವಾಹನ ತಪಾಸಣೆ ಮಾಡಿಲ್ಲ, ದೋಷಪೂರಿತ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೀರಿ, ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂಬ ಆರೋಪಿ ಪರ ವಕೀಲರ ಪ್ರಶ್ನೆಗಳಿಗೆ ಸುಳ್ಳು ಮತ್ತು ಸರಿಯಲ್ಲವೆಂದು ಅಲ್ಲಗಳೆದಿರುತ್ತಾರೆ.

23. ಸದರಿ ಮೇಲ್ಕಂಡ ಎಲ್ಲಾ ಸಾಕ್ಷಿದಾರರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಸಾ-3 ರವರು ಫಿರ್ಯಾದುದಾರರು ಹಾಗೂ ಪ್ರತ್ಯಕ್ಷವಾಗಿ ಸಾಕ್ಷಿದಾರರಾಗಿದ್ದು, ಮೃತ ಶರಣ ರವರು ಯಾವ ರೀತಿ ಅಪಘಾತದಲ್ಲಿ ಮರಣ ಹೊಂದಿರುತ್ತಾರೆಂದು ತನಗೆ ಗೊತ್ತಿಲ್ಲವೆಂದು, ಈ ಪ್ರಕರಣದ ಬಗ್ಗೆ

ಯಾವುದೇ ಮಾಹಿತಿ ಇಲ್ಲವೆಂದು ನುಡಿದಿರುತ್ತಾರೆ. ಇನ್ನು ಅಸಾ-1 ಮತ್ತು 2 ರವರು ಪಂಚನಾಮೆ ಸಾಕ್ಷಿದಾರರಾಗಿದ್ದು, ಅವರೂ ಸಹಾ ಅಭಿಯೋಜನೆಯ ವಿರುದ್ಧವಾಗಿ ಸಾಕ್ಷ್ಯ ನುಡಿದಿದ್ದು, ಸದರಿಯವರುಗಳಿಂದ ಯಾವುದೇ ಪೂರಕವಾದ ಸಾಕ್ಷ್ಯಗಳು ಲಭ್ಯವಾಗಿರುವುದಿಲ್ಲ.

24. ಇನ್ನು ಅಸಾ.4 ರವರು ಪೋಲೀಸ್ ಇಲಾಖೆಯ ಸಾಕ್ಷಿದಾರರಾಗಿದ್ದು, ಸದರಿಯವರು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆಯನ್ನು ಪಂಚರಾದ ಅಸಾ.1 ಮತ್ತು 2 ರವರ ಸಮಕ್ಷಮ ಜರುಗಿಸಿದ ಬಗ್ಗೆ, ಶವ ಪಂಚನಾಮೆ ಜರುಗಿಸಿದ ಬಗ್ಗೆ, ಶವ ತನಿಖಾ ವರದಿಯುನ್ನು ವೈದ್ಯರಿಂದ ಪಡೆದುಕೊಂಡ ಬಗ್ಗೆ, ಐಎಂವಿ ವರದಿಯನ್ನು ಪಡೆದು ತನಿಖೆ ಮುಕ್ತಾಯಗೊಂಡ ನಂತರ ಅಂತಿಮ ವರದಿಯನ್ನು ಆರೋಪಿತನ ವಿರುದ್ಧ ದಾಖಲಿಸಿರುವ ಬಗ್ಗೆ ನುಡಿದ ಸಾಕ್ಷಿದಾರರಾಗಿದ್ದು, ಸದರಿಯವರ ಸಾಕ್ಷಿಗಳಿಂದ ಆರೋಪಿತನೇ ಅಪಘಾತದ ಸಮಯದಲ್ಲಿ ಅಪಾದಿತ ವಾಹನವನ್ನು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಯಂತ್ರಣ ತಪ್ಪಿ ರಸ್ತೆಯ ಬದಿಗೆ ಪಲ್ಟಿ ಹೊಡೆಸಿ ಅಪಘಾತ ಪಡಿಸಿದ ಪರಿಣಾಮ ಶರಣ ರವರು ಮೃತ ಪಟ್ಟಿರುತ್ತಾರೆ ಎಂದು ತೀರ್ಮಾನಿಸಲು ಯಾವುದೇ ಸಮರ್ಪಕ ಸಾಕ್ಷ್ಯಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ. ಇದರಿಂದ ಈ ಪ್ರಕರಣದ ಆರೋಪಿಯ ಅಜಾಗರೂಕತೆಯಿಂದ ಸದರಿ ಅಪಘಾತವಾಗಿದೆ ಎಂದು ಹೇಳಲು ಸಾಧ್ಯವಿರುವುದಿಲ್ಲ. ಇನ್ನು ಚಾಲನಾ ಪರವಾನಗಿ ಇಲ್ಲದೆ ಆರೋಪಿಯು ಅಧಿಕೃತ ವಿಮಾ ಸೌಲಭ್ಯ ಇಲ್ಲದ ಟ್ರ್ಯಾಕ್ಟರ್ ನ್ನು ಚಾಲನೆ ಮಾಡಿರುವ ಬಗ್ಗೆ ಯಾವುದೇ ಸಾಕ್ಷ್ಯ ಲಭ್ಯವಿರುವುದಿಲ್ಲ. ಅಲ್ಲದೇ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ರಚಿಸಿದ ಎಲ್ಲಾ ಪ್ರಶ್ನೆಗಳನ್ನು ಆರೋಪಿಯು ಸುಳ್ಳು ಎಂದು ನಿರಾಕರಿಸಿರುತ್ತಾರೆ. ಆರೋಪಿಯಿಂದಲೇ ಅಪಘಾತವು ಸಂಭವಿಸಿರುತ್ತದೆ ಎಂಬುದರ ಬಗ್ಗೆ ಯಾವುದೇ ಸಾಕ್ಷ್ಯ ಲಭ್ಯವಿರುವುದಿಲ್ಲ. ಆದ್ದರಿಂದ ಸಾಕ್ಷಿದಾರರ ಸಾಕ್ಷ್ಯವು ಇಲ್ಲಿ ಅಭಿಯೋಜನೆಯ ಪ್ರಕರಣಕ್ಕೆ

ಬೆಂಬಲಿಸಿರುವುದಿಲ್ಲ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಪ್ರಕರಣದ ಪ್ರಮುಖ ಸಾಕ್ಷಿದಾರರೇ ಅಭಿಯೋಜನೆಗೆ ಬೆಂಬಲಿಸದೇ ಇರುವ ಕಾರಣ ಅಭಿಯೋಜನೆಯವರು ಪ್ರಸ್ತುತ ಆರೋಪಿತನ ಮೇಲೆ ಹೊರಿಸಿದ ಆರೋಪಗಳನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ ಸದರಿ ಪ್ರಕರಣದಲ್ಲಿ ಸಂಶಯದ ಲಾಭವನ್ನು ನೀಡಿ ಆರೋಪಿತನನ್ನು ನಿರ್ದೋಷಿ ಎಂದು ನಿರ್ಣಯಿಸಿ ಸದರಿ 1 ರಿಂದ 5 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

25. **<u>ಅಂಶ 6 :</u>** ಅಂಶ-1 ರಿಂದ 5 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಆದೇಶಿಸಿರುತ್ತದೆ.

**<u>ಆದೇಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ಅಧಿಕಾರಯುಕ್ತನಾಗಿ ಆರೋಪಿತನ ವಿರುದ್ಧ ಆರೋಪಿಸಿರುವ ಭಾರತೀಯ ದಂಡ ಸಂಹಿತೆ ಕಲಂ. 279, 337 ಮತ್ತು 304(ಎ) ಹಾಗೂ ಬಾರತೀಯ ಮೋಟಾರು ವಾಹನ ಕಾಯ್ದೆ ಕಲಂ.3 ಸಹವಾಚಕ 181, ಕಲಂ 146 ಸಹವಾಚಕ 196 ರಡಿ ದಂಡಿಸಲ್ಪಡುವ ಆರೋಪಗಳಿಂದ ಆರೋಪಿತನನ್ನು ದೋಷಮುಕ್ತ ಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ಇನ್ನು 6 ತಿಂಗಳುಗಳ ಕಾಲ ವಿಸ್ತರಿಸಲಾಗಿದೆ.

(ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 11 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

**(ಪ್ರಸನ್ನ ಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ಹೊಸದುರ್ಗ.**

## -ಅನುಬಂಧ-

**1. ಅಭಿಯೋಜನೆಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರುಃ**

| | | |
|---|---|---|
| ಅಸಾ-1 | - | ಸುರೇಶ |
| ಅಸಾ-2 | - | ಯಮುನಪ್ಪ |
| ಅಸಾ-3 | - | ಆನಂದಪ್ಪ |
| ಅಸಾ-4 | - | ಎಂ.ಡಿ.ಫೈಜುಲ್ಲಾ |

**ಅಭಿಯೋಜನೆಯ ಪರ ಗುರುತಿಸಲಾದ ನಿಶಾನೆಗಳ ಪಟ್ಟಿಃ**

| | |
|---|---|
| ನಿಪಿ-1 | : ಕೃತ್ಯ ಸ್ಥಳ ಪಂಚನಾಮೆ |
| ನಿಪಿ-1(ಎ) | : ಅಸಾ-1 ರವರ ಸಹಿ |
| ನಿಪಿ-1(ಬಿ) | : ಅಸಾ-2 ರವರ ಸಹಿ |
| ನಿಪಿ-1(ಸಿ) | : ಅಸಾ-3 ರವರ ಸಹಿ |
| ನಿಪಿ-2 | : ಕಚ್ಚಾ ನಕಾಶೆ |
| ನಿಪಿ-2(ಎ) | : ಅಸಾ-2 ರವರ ಸಹಿ |
| ನಿಪಿ-2(ಬಿ) | : ಅಸಾ-2 ರವರ ಸಹಿ |
| ನಿಪಿ-2(ಸಿ) | : ಅಸಾ-3 ರವರ ಸಹಿ |
| ನಿಪಿ-3 ಮತ್ತು 4 | : ಫೋಟೋಗಳು |
| ನಿಪಿ-5 | : ವಾಹನ ಪರಿಶೀಲನಾ ಪಂಚನಾಮೆ |
| ನಿಪಿ-5(ಎ) | : ಅಸಾ-1 ರವರ ಸಹಿ |
| ನಿಪಿ-5(ಬಿ) | : ಅಸಾ-2 ರವರ ಸಹಿ |
| ನಿಪಿ-6 | : ಅಸಾ-1 ರವರ ಹೇಳಿಕೆ |
| ನಿಪಿ-6(ಎ) | : ಅಸಾ-4 ರವರ ಸಹಿ |
| ನಿಪಿ-7 | : ದೂರು |
| ನಿಪಿ-7(ಎ) | : ಅಸಾ-3 ರವರ ಸಹಿ |
| ನಿಪಿ-8 | : ಅಸಾ-3 ರವರ ಹೇಳಿಕೆ |
| ನಿಪಿ-8(ಎ) | : ಅಸಾ-4 ರವರ ಸಹಿ |

| | |
|---|---|
| ನಿಪಿ-9 | : ಮೃತ ಶರಣ ರವರ ಶವತನಿಖಾ ಪಂಚನಾಮೆ |
| ನಿಪಿ-9(ಎ) | : ಅಸಾ-4 ರವರ ಸಹಿ |
| ನಿಪಿ-10 | : ಮೃತ ಶರಣ ರವರ ಶವತನಿಖಾ ವರದಿ |
| ನಿಪಿ-10(ಎ) | : ಅಸಾ-4 ರವರ ಸಹಿ |
| ನಿಪಿ-11 | : ವಾಹನ ಪರಿಶೀಲನಾ ವರದಿ |
| ನಿಪಿ-12 | : ಐ.ಎಂ.ವಿ. ಕಲಂ.133 ರಡಿಯಲ್ಲಿ ಚಾಸಾ-9 ರವರಿಗೆ ನೀಡಿದ ನೋಟೀಸ್ |
| ನಿಪಿ-12(ಎ) | : ಅಸಾ-4 ರವರ ಸಹಿ |
| ನಿಪಿ-13 | : ಚಾಸಾ-9 ರವರ ಹೇಳಿಕೆ |
| ನಿಪಿ-13(ಎ) | : ಅಸಾ-4 ರವರ ಸಹಿ |
| ನಿಪಿ-14 | : ಇಂಡೆಮಿನಿಟಿ ಬಾಂಡ್ |
| ನಿಪಿ-14(ಎ) | : ಅಸಾ-4 ರವರ ಸಹಿ |
| ನಿಪಿ-15 | : ಚಾಸಾ-1 ರವರ ಗಾಯದ ಪ್ರಮಾಣ ಪತ್ರ |
| ನಿಪಿ-15(ಎ) | : ಅಸಾ-4 ರವರ ಸಹಿ |
| ನಿಪಿ-16 | : ಚಾಸಾ-2 ರವರ ಗಾಯದ ಪ್ರಮಾಣ ಪತ್ರ |
| ನಿಪಿ-16(ಎ) | : ಅಸಾ-4 ರವರ ಸಹಿ |

**3. ಆರೋಪಿಯ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರು:**

ಇಲ್ಲಾ

**4. ಆರೋಪಿಯ ಪರ ಗುರುತಿಸಲಾದ ನಿಶಾನೆಗಳ ಪಟ್ಟಿ:**

ಇಲ್ಲಾ

(ಪ್ರಸನ್ನ ಕುಮಾರ್ ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಹೊಸದುರ್ಗ.